


International Journal of Kannada Research
www.kannadajournal.com

**ISSN: 2454–5813**
IJKR 2024; 10(2): 23-26
© 2024 IJKR
www.kannadajournal.com
Received: 03-02-2024
Accepted: 07-03-2024

**ಕಲಾವತಿ. ಎ**
ಕನ್ನಡ ಸಹಾಯಕ ಪ್ರಾಧ್ಯಾಪಕಿ,
ಶ್ರೀ ಬಾಲಾಜಿ ಪದವಿ ಕಾಲೇಜು,
ಹನುಮಂತನಗರ-ಬೆಂಗಳೂರು,
ಕರ್ನಾಟಕ, ಭಾರತ

**Corresponding Author:**
**ಕಲಾವತಿ. ಎ**
ಕನ್ನಡ ಸಹಾಯಕ ಪ್ರಾಧ್ಯಾಪಕಿ,
ಶ್ರೀ ಬಾಲಾಜಿ ಪದವಿ ಕಾಲೇಜು,
ಹನುಮಂತನಗರ-ಬೆಂಗಳೂರು,
ಕರ್ನಾಟಕ, ಭಾರತ

# ಮೂಕಜ್ಜಿ ಮತ್ತು ಸುಬ್ರಾಯನ ದೈನಂದಿನ ಜೀವನದ ದೃಷ್ಟಿಕೋನದ ತೌಲನಿಕ ಅಧ್ಯಯನ

**ಕಲಾವತಿ. ಎ**

**ಪೀಠಿಕೆ**

ಪರಂಪರಾನುಗತವಾಗಿ ಹರಿದು ಬಂದ ರೂಢಿ,ಸಂಪ್ರದಾಯಗಳು ವಾಸ್ತವದ ಸ್ಥಾನವನ್ನು ಆಕ್ರಮಿಸಿ ಮಾನವನ ವ್ಯಕ್ತಿತ್ವವನ್ನೇ ಕಬಳಿಸಿದವು. ಕಲ್ಪನೆಯ ಮಾಯಾಜಾಲವನ್ನೇ ಚಿರಂತನವಾದ ಸತ್ಯವೆಂದು ಅವುಗಳ ಬಗೆಗೆ ಮಾನವ ಸಮಾಜಗಳು ಕಠೋರವಾದ ಕುರುಡು ನಂಬಿಕೆಗಳನ್ನು ಬೆಳೆಯಿಸಿಕೊಂಡವು. ಅದರಿಂದ ಸಮಾಜದಲ್ಲಿ ಕಲಹ, ರಕ್ತಪಾತಗಳು ಮಿತಿ ಮೀರಿದವು.ಒಂದು ಸಂಸ್ಕೃತಿಯ ಐಹಿಕ,ಭೌತಿಕ ಬದಿಗಳ ಮೇಲೆ ನೀತಿ-ನಿಯಮ,ಪಾಪ-ಪುಣ್ಯ,ಸ್ವರ್ಗ,ನರಕ,ಈಶ ಪೂಜೆಯ ರೀತಿ-ರಿವಾಜುಗಳಂತಹ ಕಲ್ಪನಾಮಯ ಜಗತ್ತಿನ ಆಧ್ಯಾತ್ಮಿಕ ಅಂಶವು ತನ್ನ ಹಕ್ಕು ಚಲಾಯಿಸತೊಡಗಿತು. ಕಾರಂತರು ಮೂಕಜೇಜ್ಜಿಯ ಪಾತ್ರದ ಮೂಲಕ ಆಳವಾಗಿ ಬೇರೂರಿದ ಪರಂಪರೆಯ ಕಲ್ಪನೆಗಳನ್ನು ಕೆಣಕುತ್ತಾ ಒಂದು ತತ್ವದರ್ಶನವನ್ನು ಇಡಿಯಾಗಿ ನಮ್ಮ ಮುಂದಿಡುತ್ತಾರೆ.

**ಸಾರಾಲೇಖ**

ಆಡುಮುಟ್ಟದ ಸೊಪ್ಪಿಲ್ಲ, ಸಕಲಕಲಾವಲ್ಲಭ ಎಂದೇ ಪ್ರಖ್ಯಾತರಾಗಿರುವ ಕಾರಂತರ ಕಾದಂಬರಿಗಳಲ್ಲಿ ಅತ್ಯಂತ ವಿಶಿಷ್ಟ ಕಾದಂಬರಿ ಮೂಕಜ್ಜಿಯ ಕನಸುಗಳು. ಈ ಕೃತಿಗಗೆ ೧೯೭೮ರಲ್ಲಿ ಜ್ಞಾನಪೀಠ ಪ್ರಶಸ್ತಿ ದೊರೆತಿದ್ದು ಕಾದಂಬರಿಯಲ್ಲಿ ಕಥಾನಾಯಕಿಯಿಲ್ಲ, ಕಥಾನಾಯಕನಿಲ್ಲ. ಮೂಕಜ್ಜಿ ಕಾರಂತರು ಸೃಷ್ಟಿಸಿದ ಅಪೂರ್ವ ಪಾತ್ರಗಳಲ್ಲೊಂದು ಸಂಪ್ರದಾಯಿಕತೆಯಿಂದ ಹೆರೆಗಟ್ಟಿದ ಮನಸ್ಸುಗಳನ್ನು ತುಸು-ತುಸುವಾಗಿ ಕಾಯಿಸಿ ಕರಗಿಸುವ ಕೆಲಸ ಮೂಕಜ್ಜಿಯದು. ಕಾದಂಬರಿಯ ಸಾರ ಇರುವುದು ಮೂಕಜ್ಜಿ ಹಾಗೂ ಆಕೆಯ ಕುತೂಹಲಭರಿತ ಮನಸ್ಸಿನ ಮೊಮ್ಮಗ ಸುಬ್ರಾಯನ ನಡವಣ ದೀರ್ಘ ಸಂಭಾಷಣೆಗಳಲ್ಲಿ ಮೂಕಜ್ಜಿಯ ಕನಸುಗಳೇನೆ ಇರಲಿ ಅವುಗಳಿಗೆ ಸುಬ್ರಾಯ ಹೇಗೆ ಸ್ಪಂದಿಸಿ ಪ್ರತಿಕ್ರಯಿಸುತ್ತಾನೆಂಬುದೇ ಇಲ್ಲಿ ಮುಖ್ಯ.

**ವ್ಯಾಪ್ತಿ**

ಪ್ರಸ್ತುತ ಪ್ರಬಂಧದಲ್ಲಿನ ವಿಷಯ ವ್ಯಾಪ್ತಿ ಮುರಿದು ಹೋದ ರಾಮಣ್ಣ ನಾಗಿಯ ಸಂಸಾರವನ್ನು ಒಂದುಗೂಡಿಸುವಲ್ಲಿ ಮೂಕಜ್ಜಿಯ ಮಾನವೀಯ ದೃಷ್ಟಿಕೋನ. ಈ ಜಗತ್ತೆಲ್ಲ ಮೂರೂರೆ ಎಂದು ಹುಟ್ಟು-ಬಾಳು-ಸಾವಿನ ಸಂಕೇತ ಕ್ರಮವನ್ನು ಒಗಟಿನಂತೆ ಹೇಳುವುದು.ಜನ್ನ ತರುಣಿ ಯೊಂದಿಗೆ ಓಡಾಡಿ ಕೊನೆಗೆ ಅವಳನ್ನು ನಿರಾಕರಿಸುವುದು. ಹದಿನಾರರ ಹದಿ-ಹರೆಯದ ತರುಣಿಯೊಡನೆ ಐವತ್ತರ ದಡಿಯನೊಬ್ಬ ನಡೆಯಿಸಿದ ಸಮಾಗಮ. ಸಾವಿನ ವಾಸ್ತವಿಕ ನೆಲೆ. ಮೋಕ್ಷದ ಬಗೆಗಿನ ನಂಬಿಕೆ ಆಲೋಚನೆಗಳು ನಿಗದಿತ ವಿಷಯಗಳಿಗೆ ಸೀಮಿತವಾಗಿದೆ

**ವಿಧಾನ – ತೌಲನಿಕ ಅಧ್ಯಯನ**

ವಿವಿಧ ಸಾಹಿತ್ಯ ಕೃತಿಗಳ ತುಲನಾತ್ಮಕ ಅಧ್ಯಯನವೇ ತೌಲನಿಕ ಸಾಹಿತ್ಯ. ಇಬ್ಬರ ವಿಶೇಷತೆಗಳನ್ನು, ಎರಡು ಅಥವಾ ಎರಡಕ್ಕಿಂತ ಹೆಚ್ಚು ಕೃತಿಗಳನ್ನು ವಿಶ್ಲೇಷಿಸಿ ನಾವೆಲ್ಲರು ಒಂದೇ ಎಂಬುದನ್ನು ಹೇಳುವುದು.

ಪ್ರಸ್ತುತ ನಾನು ತೆಗೆದುಕೊಂಡಿರುವ ಪ್ರಬಂಧದಲ್ಲಿ ಶಿವರಾಮಕಾರಂತರ ಕಾದಂಬರಿಗಳಲ್ಲಿ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದುಕೊಂಡ ಮೂಕಜ್ಜಿಯ ಕನಸುಗಳು ಕೃತಿಯಲ್ಲಿನ ಸುಬ್ರಾಯ ಮತ್ತು ಮೂಕಜ್ಜಿಯ ನಡುವೆ ನಡೆಯುವ ಬದುಕಿನ ವೈಚಾರಿಕ ವಿಚಾರಗಳನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ.

**ವಿಷಯದ ಚರ್ಚೆ**

ಸುಬ್ರಾಯ ಇತಿಹಾಸವನ್ನು ಓದಿದ ಹುಡುಗ. ಹಳ್ಳಿಯ ಧಾರ್ಮಿಕ ಆಚರಣೆಗಳನ್ನು ತಿಳಿಯುವ ಹಂಬಲ.ತನ್ನ ಹಳ್ಳಿಯ ಸುತ್ತಮುತ್ತಲಿನ ಕಾಡುಗಳೋ,ಗುಹೆಗಳಿಗೋ ಹೋಗಿ ಹಳೆಯ ಕಲಾಕೃತಿಗಳನ್ನು ಸಂಗ್ರಹಿಸಿ ಆ ವಸ್ತುಗಳ ವಿವರಗಳನ್ನು ತಿಳಿಯಲು ಪ್ರಯತ್ನಿಸುತ್ತಾನೆ. ಆದರೆ ಅಜ್ಜಿಯಲ್ಲಿರುವ ವಿಶೇಷ ಮಾಂತ್ರಿಕ ಶಕ್ತಿ ಕೇವಲ ವಸ್ತುಗಳ ಸ್ಪರ್ಶದಿಂದ ಕಲಾಕೃತಿಗಳ ಹಿಂದಿನ ಇತಿಹಾಸವನ್ನು ನೆನಪಿಸಿಕೊಳ್ಳುವುದು.

ಬಾಲ್ಯದಲ್ಲೇ ಗಂಡನನ್ನು ಕಳೆದುಕೊಂಡ ಮೂಕಜ್ಜಿ ಸಂಪ್ರದಾಯಗಳಿಗೆ ಒಳಗಾಗಿ ಇಡೀ ಜೀವನವನ್ನು ವಿಧವೆಯಾಗಿ ಅನುಭವಿಸುತ್ತಾ ಜೀವನದ ಒಳನೋಟವನ್ನು ಕಂಡವಳು. ಮೂಕಜ್ಜಿಯದು ಮೂಡೂರಿನ ನೆಲದಲ್ಲಿ ಬೇರುಬಿಟ್ಟ ಜೀವ.ಮೂಡೂರಿನ ಭೂಮಿಯಂತೆ ಇತಿಹಾಸವನ್ನು ಪದರು ಪದರುಗಳಲ್ಲಿ ಅಡಗಿಸಿಕೊಂಡು ಮೂಕಳಾದವಳು. ಮೂಡೂರಿನ ಇತಿಹಾಸವನ್ನು ವಿವರಿಸುತ್ತ ತಾವಿರುವುದು ನಡೂರು, ಈಚಿನದು ಮೂಡೂರು,ಆಚಿನದು ಪಡೂರು ಎನ್ನುತ್ತಾ ಮೂಡೂರು ಎಂದರೆ ಸೂರ್ಯ ಹುಟ್ಟುವ ದಿಕ್ಕು ಅದು ಮನುಷ್ಯ ಜನ್ಮ ತಾಳುವ ದಿಕ್ಕು.ನಡೂರು ಎಂದರೆ ನಾವು ಬಾಳಿ, ಬದುಕುವ, ನಡೆದಾಡುವ ಊರು. ಪಡೂರು ಸೂರ್ಯ ಮುಳುಗುವ ಊರು.ಈ ಮೂರು ಊರುಗಳಿಗೆ ಬಸರಿಕಟ್ಟೆಯಲ್ಲಿ ಹುಟ್ಟಿ ಬೂದಿಕಟ್ಟೆಯಲ್ಲಿ ಮುಗಿಯುವ ಮೊದಲು ನಾವು ಓಡಾಡಿಕೊಂಡಿರುವ ಬಾಳಿನ ಕಟ್ಟೆಯಲ್ಲವೇ ಅಶ್ವತ್ಥಕಟ್ಟೆ. ಈ ಜಗತ್ತೆಲ್ಲ ಮೂರೂರೆ. ಹುಟ್ಟು-ಬಾಳು-ಸಾವಿನ ಸಂಕೇತ ಕ್ರಮವನ್ನು ಒಗಟಿನಂತೆ ಹೇಳುತ್ತಾಳೆ.ಸುಬ್ರಾಯ ಇತಿಹಾಸದ ವಿದ್ಯಾರ್ಥಿಯಾಗಿ ಮೂಕಜ್ಜಿಯ ದರ್ಶನಗಳಿಗೆ ಅರ್ಥ ಹೇಳಬಲ್ಲ ವ್ಯಾಖ್ಯಾನಕಾರ.ಇವರಿಬ್ಬರ ನಡುವೆ ನಡೆಯುವ ವಿಚಾರ ಮಂಥನದ ಪರಿಣಾಮವಾಗಿ ಮೂಡುವ ತೀರ್ಮಾನಗಳು ಸಮಕಾಲೀನ ಮಹತ್ವವನ್ನು ಪಡೆದಿವೆ.

ಹಣವಂತರಾಗಲಿ,ಬಲವಂತರಾಗಲಿ ಹೇಗೆ ನಡೆದುಕೊಂಡರೂ ಈ ಸಮಾಜ ತನ್ನ ಕಣ್ಣುಗಳನ್ನು ಮುಚ್ಚಿಕೊಂಡು ತೆಪ್ಪಗಿರುತ್ತದೆ.ಆದರೆ ಸಾಮಾನ್ಯ ಜನರು ಅಪ್ಪಿ ತಪ್ಪಿಯಾದರೂ ದಾರಿ ತಪ್ಪಿದಾಗ ಇದೇ ಸಮಾಜ ಅದೆಂತ ಗದ್ದಲವನ್ನೆಬ್ಬಿಸುವುದು. ದುಡಿದು ತನ್ನ ಹೊಟ್ಟೆ ಹೊರೆಯುವ ಹೆಣ್ಣು ಮಗಳೊಬ್ಬಳು (ನಾಗಿ) ಮೂಕಜ್ಜಿಯ ಆಪ್ತರಾದ ಶೀನಪ್ಪನಿಂದ ಶೀಲಭ್ರಷ್ಟಳಾಗಿ ತನ್ನ ಗಂಡನಿಂದ ದೂರಾಗಿದ್ದಳು. "ರಾಮಣ್ಣನ ಹೆಂಡತಿ ರಂಭೆ ಅವಳೇನೆ! ಈಗ ಹೇಗಿದ್ದಾಳೆ ನೋಡು; ಒಣಗಿದ ಪ್ರೇತ ಎಂದು ಜನ ಆಡಿಕೊಳ್ಳುತ್ತಿದ್ದರು. ಆದರೆ ಮೂಕಜ್ಜಿಯದ್ದು ಮಾತ್ರ ನಾಗಿ ಮತ್ತು ರಾಮಣ್ಣನ ಸಂಸಾರವನ್ನು ಒಂದುಗೂಡಿಸುವ ಪ್ರಯತ್ನ.ರಾಮಣ್ಣನ ತಪ್ಪುಗಳನ್ನು ಪ್ರಶ್ನಿಸುತ್ತ ಅವಳ ಮುಂದೆ ನೀನು ನಿನ್ನ ಗಂಡಸುತನದ ಜರ್ಬನ್ನೇ ತೋರಿಸಿದೆ. ನನ್ನ ಮನೆಗೆ ಬಂದ ಹೆಣ್ಣು ಗಾಣದ ಎತ್ತಿನ ಹಾಗೆ ಚಾಕರಿ ಮಾಡಬೇಕಾದೀತು ಅಂತ ಅಂದಿಲ್ಲವೇ. ನೀನು. ನಿನ್ನ ಉದಾಸೀನ ಕಂಡು ಯಾರೋ ಹೇಳಿಕೊಟ್ಟರು ಓಡಿಹೋದಳು. ಈ ಮಾತುಗಳು ರಾಮಣ್ಣನನ್ನು ಸ್ವವಿಮರ್ಶೆಗೆ ಒಳಪಡಿಸುವಂತದ್ದು. ಇಪ್ಪತ್ತು ವರ್ಷಗಳ

ನಂತರ ಅವರಿಬ್ಬರನ್ನು ಒಂದುಗೂಡಿಸುತ್ತಾಳೆ ಮೂಕಜ್ಜಿ ತಾನುಮಾಡಿದ್ದು ಸರಿಯೋ, ತಪ್ಪೋ ಎಂದು ಮೊಮ್ಮಗನ್ನು ಪ್ರಶ್ನಿಸಿದಾಗ ಸುಬ್ರಾಯನ ಮನಸ್ಸು ಮಾತ್ರ ಯಾವುದು ತಪ್ಪು ಯಾವುದು ಸರಿ ಎಂದು ನಿರ್ಧರಿಸಲಾಗದ ಗಂಭೀರ ವಿಷಯ ಎಂದು ಚಿಂತಿಸಿದ.ಬಾಳು ಇಡಿಯಾಗಿ ಬದುಕಲಿಕ್ಕೆ ಎಂದು ನಂಬಿದವಳು ಮೂಕಜ್ಜಿ. ಇಲ್ಲಿ ಕಾರಂತರ ಮನೋಧರ್ಮ ಹಾಗೂ ದೃಷ್ಟಿಕೋನವನ್ನು ಕಾಣಬಹುದು.

ಜನ್ನ ಹಾಗೂ ಅನಂತರಾಯನ ಕಾಮ ಪ್ರೇರಣಗಳು ವಿಕೃತವಾದ ರೂಪವನ್ನು ಧರಿಸಿವೆ. ಜನ್ನ ಮದುವೆಯ ಆಸೆ ತೋರಿಸಿ ತರುಣಿಯೊಂದಿಗೆ ಓಡಾಡಿ ಕೊನೆಗೆ ಅವಳನ್ನು ನಿರಾಕರಿಸುತ್ತಾನೆ.ಆ ಯುವತಿ ಬಸುರಾಗುತ್ತಾಳೆ.ಜನ್ನನಿಗೆ ಅವಳೊಂದಿಗೆ ವಿವಾಹ ಆಗಲೇ ಬೇಕಾಗುತ್ತದೆ.ಇದನ್ನೆಲ್ಲ ಒಳಗಣ್ಣಿನಿಂದ ಕಂಡ ಮೂಕಜ್ಜಿ ಕಂಡು-ಕಾಣದ ಸತ್ಯಗಳನ್ನೆಲ್ಲ ತಣ್ಣಗೆ ಹೇಳುವುದನ್ನು ಕಂಡು ವಾಸ್ತವದ ಪ್ರತಿನಿಧಿಯಾದ ಮೊಮ್ಮಗನಿಗೆ ಇದೇನು ಅದ್ಭುತ ಶಕ್ತಿಯೋ ಎಂದು ಸತ್ಯಶೋಧಕನಾಗಿ ಓರೆಗಲ್ಲಿಗೆ ಹಚ್ಚುತ್ತಾನೆ.

ದೇವರು-ದಿಂಡರು, ಭಕ್ತಿ-ಭಾವ,ನಂಬಿಕೆ-ಅಪನಂಬಿಕೆ, ಆಚಾರ-ವಿಚಾರಗಳ ಬಗೆಗೆ ನೀರು ಕುಡಿದಂತೆ ಹೇಳುವ ಮೂಕಜ್ಜಿ. ಒಮ್ಮೆ ಮೊಮ್ಮಗ ಅಜ್ಜಿ ದಾಸರ ಬಗ್ಗೆ ಕೇಳಿದ್ದೀರಲ್ಲ. ವೈರಾಗ್ಯ ಜೀವನ ಅವರದ್ದು ವಿಠಲನಲ್ಲಿ ಮೋಕ್ಷವನ್ನು ಕೇಳಲಿಲ್ಲವೇ? ಎಂದಾಗ ಅಜ್ಜಿ ಏನು ಮೋಕ್ಷವೋ ಏನೋ ಮಾಣಿ.ದಾಸರು ಮುಕ್ತಿಯನ್ನು ಕೇಳಿದ್ದು ಯಾರಲ್ಲಿ ತಮ್ಮ ಹೆಂಡಂದಿರ ಜೊತೆ ಕೈಲಾಸದಲ್ಲೋ, ವೈಕುಂಠದಲ್ಲೋ ಇರುವ ವಿಷ್ಣುವನ್ನೋ ಶಿವನನ್ನೋ ತಾನೆ. ಅವರಿಗೆ ಹೆಂಡಂದಿರಿಂದ ಮುಕ್ತಿ ದೊರೆಯಲಿಲ್ಲ ಇನ್ನೂ ಇವರೇನು ಕೊಟ್ಟಾರು ಪಾಶ ಕಡಿದು ಕೊಳ್ಳಲಾರದ ದೇವರು ಎನ್ನುತ್ತಾಳೆ. ಮೂಕಜ್ಜಿಯ ವಿಚಾರಧಾರೆಗಳನ್ನು ಹೊರಗೆಳೆಯುವುದೇ ಸುಬ್ರಾಯ. ಕಾರಂತರ ಸೃಷ್ಟಿ ಶರ್ಲಾಕ್, ಹೋಮ್ಸ ಅಂದರೂ ಅಡ್ಡಿಯಿಲ.

ಸಾವನ್ನು ವಾಸ್ತವಿಕ ನೆಲೆಯಲ್ಲಿಯೇ ಕಂಡ ಮೂಕಜ್ಜಿ. ಸುಬ್ರಾಯನ ತಂದೆ ತೀರಿಕೊಂಡಾಗ ಹೇಳುವ ಮಾತುಗಳು ಇದೇನು ನಿನ್ನ ಗಂಡಸುತನ? ನೀನೇನು, ನಾನೇನು,ಯಾರೇನು? ಯಾರು ಶಾಶ್ವತ ಹೋಗಿ ಕೊಳ್ಳಿ ಇಟ್ಟು ಉರಿಸಿ ಬಾ. ಇದೆಲ್ಲ ಒಂದು ಆಟ.ಮನಸ್ಸನ್ನು ಗಟ್ಟಿ ಮಾಡಿಕೋ ಎಂದು ಹೇಳುವ ಸಾಂತ್ವನದ ಮಾತುಗಳು ಜೀವನವೆಂಬುದು ನೀರಿನ ಮೇಲಿನ ಗುಳ್ಳೆಯಂತೆ. ಕ್ಷಣಿಕವಾದುದು ಬದುಕು ಶಾಶ್ವತವಲ್ಲ.ಎಂಬ ಅರಿವು ಸುಬ್ರಾಯನಲ್ಲಿ ಮೂಡಿತು.ವಾಸ್ತವದ ನೆಲೆಯಲ್ಲಿ ನಿಂತ ಮೂಕಜ್ಜಿ ಓದುಗನಿಗೆ ಅನ್ವೇಷಕ ಪ್ರವೃತ್ತಿಯ ಮೂರ್ತ ರೂಪವಾಗಿದ್ದಾಳೆ.

ಹದಿನಾರರ ಹದಿಹರೆಯದ ತರುಣಿಯೊಡನೆ ಐವತ್ತರ ಗಡಿಧಾಟಿದ ಧಾಂಡಿಗನೊಬ್ಬ ಎಲ್ಲರೆದುರಿನಲ್ಲಿ ನಡೆಸಿದ ಸಮಾಗಮ ಒಂದು ಧಾರ್ಮಿಕ ಕ್ರಿಯೆಯೆಂದು ನಡೆಯಿಸುವ ಸಂಭೋಗ ಕ್ರಿಯೆ, ರಾಕ್ಷಸ ವಿವಾಹ ಅಲ್ಲದೆ ಬೇರೆ ಬೇರೆ ತಂಡಗಳಲ್ಲಿ ಸಾಗಿದ ಅಪಹರಣಗಳು ಇಲ್ಲಿವೆ. ಅಜ್ಜಿ ತನ್ನ ಒಳಗಣ್ಣಿನಿಂದ ಸುತ್ತಲ ಜಗತ್ತಿನ ನಡೆ-ನುಡಿ,ಆಚಾರ-ವಿಚಾರಗಳ ಮೇಲೂ ಪ್ರಖರವಾದ ಬೆಳಕನ್ನು ಬೀರಬಲ್ಲವಳಾಗಿದ್ದಾಳೆ. ಕೆಲವೊಂದು

ವಿಚಾರಗಳು ಸುಬ್ರಾಯನ ಮನಸ್ಥಿತಿಗೆ ಅಪ್ರಸ್ತುತವಾಗಿ ಕಂಡರೂ ಅದು ಸಮಾಜ, ಸಂಸ್ಕೃತಿಯ ಒಂದು ಭಾಗವಾಗಿ ಹೊರ ಹೊಮ್ಮಿದೆ.ಸಂಸ್ಕೃತಿಯ, ನಂಬಿಕೆಗಳ ಕುರಿತಾದ ಸಂಶಯ ಹುಟ್ಟಿಸುವ ಸಂಗತಿಗಳಿಗೆ ತರ್ಕಬದ್ಧವಾಗಿ ಪ್ರಶ್ನಿಸುವ ಆಲೋಚನೆಗಳ ಪ್ರತಿಮೆಯಾಗಿ ಸುಬ್ರಾಯನ ಪಾತ್ರವನ್ನು ಕಾಣುತ್ತೇವೆ.

ಕಾದಂಬರಿಯಲ್ಲಿ ಮೂಕಜ್ಜಿ ಹೇಳುತ್ತಿರವುದು ಕನಸುಗಳಲ್ಲ ವಿಚಾರಗಳು,ಕಲ್ಪನಾವಿಲಾಸವಲ್ಲ,ವೈಚಾರಿಕ ಹೊಳಹುಗಳು ಎಂದರೆ ತಪ್ಪಾಗಲಾರದು. ಸುಬ್ಬರಾಯ ಹುಡುಕಿ ತಂದ ಕೊಂಬಿನ ಚೂರನ್ನು ಮೂಕಜ್ಜಿ ಕೈಲಿ ಹಿಡಿದ ಒಡನೆಯೇ ಕೋಣನ ಕುಲದ ಹುಲಿಯ ಜನ,ಅವರ ನೀತಿ,ನಡಾವಳಿ,ಬೆತ್ತಲೆ ಬದುಕು ಮುಚ್ಚು ಮರೆಯಿಲ್ಲದ ಲೈಂಗಿಕ ಜೀವನ ಹಾಗೂ ಬೇರೆ ಬೇರೆ ವಸ್ತುಗಳನ್ನು ಮುಟ್ಟಿದಾಗ ವೈದಿಕ ಯುಗಕ್ಕೆ ಮೊದಲಿನ ನಂತರದ ದೇವರುಗಳು ಮತ,ನಂಬಿಕೆ,ಪೂಜೆ,ವಿಧಿ ಗಂಡು ಹೆಂಡಿನ ಕಟ್ಟುಕಟ್ಟಳೆ ಇತ್ಯಾದಿಗಳನ್ನು ಕಂಡಂತೆ ಹೇಳುತ್ತಾರೆ. ಆದರೆ ಈಕೆ ಇಲ್ಲಿ ಕಾಣುವುದಕ್ಕೂ ಸಾಂಸ್ಕೃತಿಕ ಮಾನವ ವಿಜ್ಞಾನ ಹಾಗೂ ಸಮಾಜ ಶಾಸ್ತ್ರಗಳ ಮುಖಾಂತರ ನಮಗೆ ಕಾಣಿಸುವುದಕ್ಕೂ ವ್ಯತ್ಯಾಸವೇನು ಕಾಣಿಸುವುದಿಲ್ಲ.

ಚರಿತ್ರೆಯನ್ನು ಒದಿಕೊಂಡ ಸುಬ್ರಾಯನಿಗೆ ಹಾಗೆ ಅನಿಸುತ್ತದೆ.ಸುಬ್ರಾಯನಿಗೆ ರಾಮಾಯಣ ನಡೆದ ಕಥೆ ಅನಿಸಲಿಲ್ಲ. ಅದೊಂದು ಬರಹದ ಕತೆ.ತಾನು ಓದಿದ ಇಲ್ಲವೆ

ಇತರರಿಂದ ಕೇಳಿದ ಅಥವಾ ಪುರಾಣಗಳು ಅಜ್ಜಿ ಹೇಳುವಷ್ಟು ಸತ್ಯವನ್ನು ಹೇಳಲಾರವು. ಮೂಕಜ್ಜಿಯ ಕನಸುಗಳು ಕೃತಿ ನಮ್ಮ ಇಂದಿನ ಜೀವನದ ಬಗೆಗೆ ನಮ್ಮ ಹಿಂದಿನವರು ಬದುಕಿದ ಬಗೆಯೂ ಪ್ರೇರಣೆಯನ್ನು ಒದಗಿಸುತ್ತದೆ.ನಮ್ಮ ಜೀವನದ ಕಾರಣಗಳು ಅವರ ಜೀವನ ಕ್ರಮದಿಂದ ರೂಪುಗೊಂಡಿರುತ್ತವೆ. ಅವರ ಜೀವನದಲ್ಲಿ ಅಡಗಿದ್ದ ಬೇರುಗಳು ಇಂದು ಎಲೆಗಳಾಗುತ್ತವೆ. ಸಾಂಸ್ಕೃತಿಕ ಪರಂಪರೆಯೊಂದನ್ನು ಕುರಿತ ಚಿಂತನಯನ್ನು ಇಲ್ಲಿ ಕಾಣಬಹುದು.

ಮೂಕಜ್ಜಿಯ ಕನಸುಗಳಲ್ಲಿ ಕಾರಂತರ ಮನೋಧರ್ಮ ಹಾಗೂ ದೃಷ್ಟಿಕೋನಗಳು ಹೆಜ್ಜೆ-ಹೆಜ್ಜೆಗೂ ಕಂಡುಬರುತ್ತದೆ. ತಮ್ಮ ಜ್ಞಾನವನ್ನು ಒಬ್ಬ ಸತ್ಯಶೋಧಕರಾಗಿ ಸೆಟೆದಿಟಗಳ ಓರೆಗಲ್ಲಿಗೆ ಹಚ್ಚುತ್ತಿರುವುದೇ ಆಗಿದೆ. ಗಂಡು-ಹೆಣ್ಣುಗಳ ಸಂಬಂಧ, ನಿಸರ್ಗದ ಪ್ರೇರಣೆಗಳ ಸ್ಥಾನಮಾನಗಳನ್ನು ಕುರಿತು ಅವರ ಮನಸ್ಸಿನಲ್ಲಿ ಒಂದೇ ಸಮನೆ ನಡೆದ ಮಂಥನವೇ ಮೂಕಜ್ಜಿಯ ಕನಸುಗಳು ಕಾದಂಬರಿಯಲ್ಲಿ ಮೂರ್ತ ಸ್ವರೂಪವನ್ನು ಪಡೆದಿವೆ. ಮಾನವನ ಬಾಳಿಗೆ ಆಕಾರವನ್ನು ತಂದುಕೊಡುವ ವಿಚಾರ ಪ್ರಣಾಳಿಯತ್ತ ಚಿಕಿತ್ಸಕನ ದೃಷ್ಟಿಯಿಂದ ನೋಡುವುದೇ ಇಲ್ಲಿನ ಮುಖ್ಯ ಉದ್ದೇಶ.ಜೀವನ ದರ್ಶನವೇ ಇಲ್ಲಿನ ಅಡಿಗಲ್ಲು.ಮಾನವ ಸಾಂಸ್ಕೃತಿಕವಾಗಿ ವಿಕಸನಗೊಳ್ಳುತ್ತ ನಡೆದಂತೆ ಆಯಾಕಾಲಗಳ ಮೇಲೆ ಬಿದ್ದ ಒತ್ತಡಗಳು ಅವುಗಳಿಂದಾಗಿ ಹುಟ್ಟಿಕೊಂಡ ಸಂಘರ್ಷಗಳು. ಮಾನವ ಕುಲಗಳು ಸಂಕ್ರಮಣ ವ್ಯವಸ್ಥೆಯಲ್ಲಿರುವಾಗ ಅನುಭವಿಸಿದ ಯಾತನೆಗಳು ಹಾಗೂ ಎದುರಿಸಿದ ಸಮಸ್ಯೆಗಳ ಅರಿವು ನಮ್ಮಲ್ಲಿ ಮೂಡುತ್ತದೆ.ಸುಬ್ರಾಯನಿಗೆ ಮೂಕಜ್ಜಿಯ ಬಗ್ಗೆ ಪ್ರೀತಿ ಗೌರವಗಳಿರುವಂತೆ ಅನುಮಾನ,ಕುತೂಹಲ, ವಿಸ್ಮಯಗಳೂ ಇವೆ.

ಒಟ್ಟಾರೆಯಾಗಿ ಕಾರಂತರು ಮೂಕಜ್ಜಿಯ ಕನಸುಗಳು ಕಾದಂಬರಿಯಲ್ಲಿ ಸುಬ್ರಾಯ ಹಾಗೂ ಮೂಕಜ್ಜಿಯ ಪಾತ್ರಗಳ ಮೂಲಕ ನಾಲ್ಕೈದು ಸಾವಿರ ವರ್ಷಗಳಿಂದ ಹರಿದು ಬಂದ ಸೃಷ್ಟಿ ಸಮಸ್ಯೆಯೊಂದನ್ನು ಮಥಿಸಲು ಯತ್ನಿಸಿದ್ದಾರೆ. ಮೂಕಜ್ಜಿಗೆ ಕಾಡುವ ಕನಸುಗಳು ಭೂತದ ಕಾಡುವಿಕೆ ಮಾತ್ರವಲ್ಲ, ವರ್ತಮಾನದ ವ್ಯಾಖ್ಯೆಯೂ ಹೌದು. ಮೂಕಜ್ಜಿ ತನ್ನದೇ ಜೀವನದ ಆಧಾರದ ಮೇಲೆ ಹೊಸದೊಂದು ಅರ್ಥವನ್ನು ಕೊಡುವುದು ಎಲ್ಲರೂ ಒಪ್ಪಲೇಬೇಕಾದ ವಿಚಾರಗಳು. ಮೂಕಜ್ಜಿಯೆಂದರೆ ಅಸ್ತಿತ್ವವಾದೀ ಮಾನವತಾವಾದವನ್ನು ಪ್ರತಿಪಾದಿಸುವ ತತ್ವಜ್ಞಾನಿ. ಬಟ್ರಾಂಡ್ ರಸ್ ಲನೂ ತನ್ನ ಈಡಿಜಜ ಟಚಿಟಿ ತಿಠಿಝಖಿಠಿ ದಲ್ಲಿ ಇದೇ ರೀತಿಯ ಮೌಲ್ಯಗಳನ್ನು ಪ್ರತಿಪಾದಿಸುತ್ತಾನೆ.ನಾವೆಲ್ಲ ಮುಳುಗುತ್ತಿರುವ ಹಡಗಿನ ಪ್ರವಾಸಿಗಳು.ನಮಗೆ ನಾವೇ ಆಧಾರ. ಪರಸ್ಪರ ಸಹಾನುಭೂತಿ, ಪ್ರೀತಿ ಇವೇ ನಮ್ಮ ಕೇಂದ್ರ ಮೌಲ್ಯಗಳು ಎನ್ನುತ್ತಾರೆ. ಮೂಕಜ್ಜಿಯ ಕನಸುಗಳು ಕೃತಿ ಬದುಕಿನ ಮಾರ್ಗದರ್ಶನ ಎಂದರೆ ತಪ್ಪಾಗಲಾರದು.

## ಪರಾಮರ್ಶನ ಗ್ರಂಥಗಳು


೧. ಕನ್ನಡ ಸಾಹಿತ್ಯ ಈ ಶತಮಾನದ ನೋಟ. ಶಿವರಾಮಕಾರಂತ, ಸಂಪಾದನೆ: ಟಿ.ಪಿಅಶೋಕ

೨. ಪುಟ:೨೨೯,೨೩೧,೨೩೩,೨೩೭

೩. ಕಾರಂತರ ಕಾದಂಬರಿಗಳು ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ: ಕರ್ನಾಟಕ ಸಂಘ ಪುತ್ತೂರು

೪. ಪುಟ:೭೧,೭೩,೭೫,೮೩,೯೧

೫. ಕಣ್ಣಲ್ಲಿ ಕಂಡ ಕಾರಂತ: ಪುಟ: ೧,೨

೬. ಅಂತರ್ಜಾಲದಿಂದ ಮಾಹಿತಿಯನ್ನು ಪಡೆಯಲಾಗಿದೆ.

7. https://Kannada.pratilipi.com:story
8. https://nilume.net
9. https://kn.quara.com
10. https:www.kannadaloka.in
11. https://sampada.net